# ಲವಕುಶ ಉದ್ಯಾನವನ!

ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಜಲಾಶಯದ ಬಳಿ ಲವಕುಶ ಉದ್ಯಾನವನವೆಂಬ ಈ ವಿಶಿಷ್ಟ ಉದ್ಯಾನವನವಿದ್ದು, ಸುಂದರವಾದ ಕಲಾಕೃತಿಗಳ ಮೂಲಕ ಲವಕುಶರ ಕಥೆ ಹೇಳುತ್ತದೆ. ಲೋಕಾಪವಾದದ ಕಾರಣದಿಂದ ಶ್ರೀರಾಮನು ಸೀತೆಯನ್ನು ಕಾಡಿಗೆ ಕಳಿಸಲು, ವಾಲ್ಮೀಕಿ ಮುನಿಗಳ ಆಶ್ರಮ ಸೇರಿ ಲವಕುಶರಿಗೆ ಜನ್ಮ ಕೊಡುವ ಸೀತೆಯು ಲವಕುಶರನ್ನು ಆಡಿಸುತ್ತಿರುವುದು, ವಾಲ್ಮೀಕಿ ಮುನಿಗಳು ಅವರಿಗೆ ಬೋಧಿಸುತ್ತಿರುವುದು ಹಾಗೂ ಬಿಲ್ವಿದ್ಯೆ ಕಲಿಸುತ್ತಿರುವುದು, ಅನಂತರ ಅವರು ಶ್ರೀರಾಮನ ಅಶ್ವಮೇಧಯಾಗದ ಕುದುರೆಯನ್ನು ಕಟ್ಟಿಹಾಕುತ್ತಿರುವುದು, ಲಕ್ಷ್ಮಣ, ವಾನರ ಸೈನ್ಯ ಮತ್ತು ಶ್ರೀರಾಮರೊಂದಿಗೆ ಯುದ್ಧ ಮಾಡುತ್ತಿರುವುದು.. ಇವೇ ಮೊದಲಾದ ಆಕೃತಿಗಳು ಬಹಳ ಮನೋಜ್ಞವಾಗಿವೆ! ಈ ಉದ್ಯಾನವನದ ಬಳಿ, ಕೃಷ್ಣ ಉದ್ಯಾನವನ ಹಾಗೂ ಶಿಲೋದ್ಯಾನ ಎಂಬ ಇನ್ನೆರಡು ಸುಂದರ ಉದ್ಯಾನವನಗಳಿವೆ.

ಚಿತ್ರ- ಬರಹ: **ಡಾ.ಬಿ.ಆರ್.ಸುಹಾಸ್, ಬೆಂಗಳೂರು**





# ದುಂಡಿ

ಹೇಗೆ ಅಳತೆ ಮಾಡಿದರೂ ಇದರ ಸುತ್ತಳತೆ ಮೂರಡಿ ಇದ್ದು, ಬರೋಬ್ಬರಿ 78 ಕೆಜಿ ತೂಕವಿದೆ. ಮೊದಲು ಕ್ವಿಂಟಲ್ ಮೇಲೆ ತೂಕವಿತ್ತಂತೆ. ಅಯಸ್ಕಾಂತ ಹಿಡಿದಿಟ್ಟುಕೊಳ್ಳುವ ಶಕ್ತಿ ಇರುವ ಇದಕ್ಕೆ ರಂಧ್ರವಿದೆ. ಅದರ ಪಕ್ಕದಲ್ಲಿ ಹಿಡಿದುಕೊಳ್ಳಲು ಕೊಂಡಿಗಳುಳ್ಳ (ಕೊಂಡಿಗಳು ಈಗ ಮುರಿದಿವೆ) ಕಿವಿಗಳಿವೆ. ಊರಿನವರೂ ಸೇರಿದಂತೆ, ಅಕ್ಕಪಕ್ಕದ ಊರಿನವರು ಇದರಲ್ಲಿ ಔಡಲ (ಹರಳು) ಅರೆಯುತ್ತಿದ್ದರು. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಹುರುಳಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಳದ ಅಂಗಳದಲ್ಲಿರುವ ಇದು ಇಲ್ಲಿಗೆ ಹೇಗೆ ಬಂತು? ಯಾವಾಗ ಬಂತು? ಎಲ್ಲಿಂದ ಬಂತು? ಎಂಬುದು ಊರಿನ ಯಾವ ಹಿರಿಯರಿಗೂ ಗೊತ್ತಿಲ್ಲ. ಪೂರ್ವಕಾಲದಲ್ಲಿ ಸಂತೆ ಮಾಡಿಕೊಂಡು ಬರುವಾಗ ಈ ಊರಿನ ಹೆಣ್ಣುಮಗಳೊಬ್ಬಳು ತನ್ನ ಸಂತೆ ಬುಟ್ಟಿಯಲ್ಲಿಟ್ಟುಕೊಂಡು ಬಂದಳಂತೆ. ಕುಂತಳ ನಗರ ಸಾಮ್ರಾಜ್ಯದ (ಈಗಿನ ಕುಬಟೂರು) ದೊರೆ ಚಂದ್ರಹಾಸನ ಕಾಲದ ಫಿರಂಗಿ ಗುಂಡಂತೆ. ಶಿಕ್ಷೆಯ ರೂಪದಲ್ಲಿ ಇದನ್ನು ತಪ್ಪು ಮಾಡಿದವರ ಕೊರಳಿಗೆ ನೇತುಹಾಕಿ ನಿಲ್ಲಿಸುತ್ತಿದ್ದರಂತೆ... ಹೀಗೆ ಹಲವಾರು ಕತೆಗಳಿವೆ. ಜಾತ್ರೆ, ಯುಗಾದಿ ಮತ್ತಿತರ ಹಬ್ಬ ಹರಿದಿನಗಳಲ್ಲಿ ಇದನ್ನು ಎತ್ತಿ ಹೆಗಲಮೇಲೆ ಇಟ್ಟುಕೊಳ್ಳುವ ಕಸರತ್ತುಗಳು ನಡೆಯುತ್ತವೆ. ಫಿರಂಗಿ ಗುಂಡಿನಂತಿರುವ ಇದನ್ನು ಊರಿನವರು ದುಂಡಿ ಎಂದೇ ಕರೆಯುತ್ತಾರೆ.

ಚಿತ್ರ- ಬರಹ: **ಹೆಚ್.ಜಿ. ಅರುಣ್ ಕುಮಾರ್ ಹುರುಳಿ, ಸೊರಬ**

# ಮರದೊಳಗೆ ಲಾಕರ್

ಈಗಾಗಲೇ ದೇಶವ್ಯಾಪಿಯಾಗಿ ಹೊರಬರುತ್ತಿರುವ ಕಪ್ಪುಹಣದ ಅಬ್ಬರದಲ್ಲಿ ಇಲ್ಲಿದೆ ನೋಡಿ ಬಿಳಿಬಣ್ಣ ಹೊಡೆಯಿಸಿಕೊಂಡ ಮರದ ಲಾಕರ್! ಹಾವುಗಳಿರಬೇಕಾದ ಮರದ ಪೊಟರೆಯೊಳಗೆ ನಾಜೂಕಾಗಿ ಬಾಗಿಲು, ಬೀಗಗಳನ್ನು ಹೊಂದಿದ ಸಾಲಾದ ಈ ಮೂರು ಲಾಕರ್‌ಗಳು ಕಾಣಸಿಕ್ಕಿದ್ದು ಕೋಲ್ಕತ್ತಾದ ವಿಕ್ಟೋರಿಯಾ ಮೆಮೋರಿಯಲ್ ಹಾಲ್ ಪಕ್ಕದ ಗಾರ್ಡನ್‌ನಲ್ಲಿ!

**ಮಾನಸ ಶಿವರಾಮಕೃಷ್ಣ**

ಚಿತ್ರ: **ಭೂಮಿ ಕೆ. ಅಡಿದಂ**

